**ಸಿ.ಸಿ. ಸಂಖ್ಯೆ 3850/2023**
**ಪಿ.ಡಬ್ಲ್ಯೂ-01**

**ದಿನಾಂಕಃ 26-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು- ಆರೋಪಿಯ ಪರ ಶ್ರೀ. ಹೆಚ್.ಎನ್, ವಕೀಲರಿಂದ -**

6. ನಾನು ಹಾಲಿನ ವ್ಯಾಪಾರವನ್ನು ಮಾಡುತ್ತೇನೆ ಎಂದು ತೋರಿಸಲು ಮತ್ತು ಅದರಿಂದ ಬರುವ ಆದಾಯದ ಬಗ್ಗೆ ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಹೆಸರಿನಲ್ಲಿ 5 ಎಕರೆ ಜಮೀನು ಇದೆ. ನನ್ನ ಹೆಸರಿನಲಿ 5 ಎಕರೆ ಜಮೀನು ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ, ಆದರೆ ಹಾಜರುಪಡಿಸುತ್ತೇನೆ. ನನ್ನ ಜಮೀನನಿನಲ್ಲಿ ನಾನು ರಾಗಿ, ಜೋಳ, ಅಡಿಕೆ ಮತ್ತ ತೆಂಗುಗಳನ್ನು ಬೆಳೆದಿದ್ದೇನೆ. ಸದರಿ ಬೆಳೆಗಳಿಗೆ ಸಂಬಂದಿಸಿದಂತೆ ನಾನು ಬೆಳೆ ದೃಢೀಕೃರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಬೆಳೆಗಳ ಪೈಕಿ ಅಡಿಕೆಯಿಂದ ನಾನು ವಾರ್ಷಿಕ ಆದಾಯವನ್ನು ಪಡದುಕೆಕೊಳ್ಳುತ್ತೇನೆ ಮತ್ತು ತೆಂಗಿನ ಮರಗಳಿಂದ ಪ್ರತಿ 2 ರಿಂದ 3 ತಿಂಗಳಿಗೆ ಆದಾಯವನ್ನು ಪಡೆದುಕೊಳ್ಳುತ್ತೇನೆ. ನಾನು ನನ್ನ ಅದಾಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ, ಆದರೆ ಹಾಜರುಪಡಿಸುತ್ತೇನೆ.

7. ಅಡಿಕೆ, ತೆಂಗು, ಸಪೋಟ, ಹುಣಸೆ ಮತ್ತು ಹಲಸಿನ ಹಣ್ಣಿನಿಂದ ನನಗೆ ತಿಂಗಳಿಗೆ ರೂ. 50,000/- ದಷ್ಟು ಆದಾಯ ಇದೆ. ಈ ಸದರಿ ಬೆಳೆಗಳು ವರ್ಷಕ್ಕೆ ಬರುವ ಆದಾಯವಾಗಿದೆ ಎಂದರೆ ಸಾಕ್ಷಿಯು ಹೌದು

ಎನ್ನುತ್ತಾರೆ. ನಿಮಗೆ ತಿಂಗಳಿಗೆ ವ್ಯವಸಾಯದಿಂದ ರೂ. 50,000/- ಲಾಭ ಬರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ನನ್ನ ಜಮೀನನ್ನು ಬಾಡಿಗೆಗೆ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ಜಮೀನಿನಲ್ಲಿ ಹಾಲೋ ಬ್ರಿಕ್ಸ್ ವ್ಯಾಪಾರ ಮಾಡುವ ವ್ಯಕ್ತಿಯ ಹೆಸರು ರವಿ ಆಗಿದೆ. ನನಗೆ ವರ್ಷಕ್ಕೆ ರೂ. 2,50,000/- ಸದರಿ ಬಾಡಿಗೆಯಿಂದ ಬರುತ್ತದೆ. ಸದರಿ ಆದಾಯವು ವಾಣಿಜ್ಯ ಆದಾಯವಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಆಸ್ತಿ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ಸದರಿ ಪ್ಯಾಕ್ಟರಿಯನಲ್ಲು ನಡೆಸಲು ನಾನು ರವಿ ರವರ ಹೆಸರಿನಲ್ಲಿ ವಿದ್ಯುತ್ ಸಂಪರ್ಕವನ್ನು ಪಡದುಕೊಂಡಿರುತ್ತೇನೆ. ಸರ್ವೆ ನಂ.1/15 ರ ಜಮೀನನಲ್ಲಿ ನಾನು ಹಾಲೋ ಬ್ರಿಕ್ಸ್ ಪ್ಯಾಕ್ಟರಿ ನಡೆಸಲು ಜಾಗವನ್ನು ಬಾಡಿಗೆಗೆ ನೀಡಿರುತ್ತೇನೆ. ಸದರಿ ಜಾಗವು ಎರಡುವರೆ ಎಕರೆ ವಿಸ್ತೀರ್ಣವಾಗಿದೆ. ಸದರಿ ಪ್ಯಾಕ್ಟರಿಯನ್ನು 2015 ನೇ ಇಸವಿಯಿಂದ ಮಾಡಲಾಗಿರುತ್ತದೆ. ನಾನು ಹಾಲೋ ಬ್ರಿಕ್ಸ್ ಪ್ಯಾಕ್ಟರಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

8. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ೊಲ ಆರೋಪಿಯು ಬಿ.ಬಿ.ಎಂ.ಪಿ ಕಾಂಕ್ರ್ಟಾರ್ ಎಂದು ಹೇಳಿರುತ್ತೇನೆ, ಆದರೆ ಅವರು ಯಾವ ದರ್ಜೆಯ ಕಾಂಕ್ಟ್ರಾರ್ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಆದಾಯದ ಬಗ್ಗೆ ನಾನು ಯಾವುದೇ ರೀತಿಯ ಪರಿಶೀಲನೆ

ಮಾಡಿರುವುದಿಲ್ಲ ಅದರೆ ಅವರು ನನ್ನ ತಂಗಿಯ ಮಗಳ ಸ್ನೇಹಿತನಾಗಿರುತ್ತಾರೆ. ನನಗೆ ಕಳೆದ 10 ವರ್ಷಗಳಿಂದ ಬೇರೆ ಯವರಿಗೆ ಸಾಲ ಕೊಡುವ ಮತ್ತು ಅವರಿಂದ ಸಾಲವನ್ನು ಪಡೆದುಕೊಳ್ಳುವ ಅಬ್ಯಾಸ ಇದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಯು ವಾಟರ್ ಪ್ಯೂರಿ ಪೈಯರ್ ಸರ್ವಿಸ್ ಕೆಲಸವನ್ನು ಮಾಡುತ್ತಾರೆ ಎಂದು ತಿಳಿಸಿರುತ್ತೇನೇ, ಆದರೆ ಅವರು ಎಲ್ಲಿ ಮತ್ತು ಯಾವಾಗಿನಿಂದ ಸದರಿ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಮಗೂ ಮತ್ತು ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಮತ್ತು ಅವರು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ**